ನಾವು ಬೇರೆ ಏಜೆನ್ಸಿಗಳಿಗೆ ಕೊಟ್ಟು ಪರ್ಯಾಯ ವ್ಯವಸ್ಥೆ ಮಾಡುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಪರ್ಯಾಯ ವ್ಯವಸ್ಥೆಯನ್ನು ಮಾಡಲಾಗಿದೆ.

ಶ್ರೀ ಪಿ. ರಾಜೀವ್:– ಮಾನ್ಯ ಅಧ್ಯಕ್ಷರೆ, ಪಹಣಿ ಪತ್ರಕ್ಕಾಗಿ 50 ಕಿ.ಮೀ. ಹೋಗುತ್ತಾರೆ.

ಅಧ್ಯಕ್ಷರು:– ಶ್ರೀ ಅಪ್ಪಾಜಿಯವರು ಹಾಜರಿಲ್ಲ. ಮಾನ್ಯ ಹೆಚ್.ಎಸ್. ಪ್ರಕಾಶ್‌ರವರು ಮಾತನಾಡುವುದು.

8. ವಿಷಯ: ನಗರಸಭೆಯ ಅವಿಶ್ವಾಸ ನಿರ್ಣಯ ಸಭೆಯಲ್ಲಿ ನೂರಾರು ಪೊಲೀಸರನ್ನು ಹಾಕಿ ಸಭೆ ನಡೆಸಿರುವ ಬಗ್ಗೆ.

ಶ್ರೀ ಹೆಚ್.ಎಸ್. ಪ್ರಕಾಶ್ (ಹಾಸನ):– ಮಾನ್ಯ ಅಧ್ಯಕ್ಷರೆ, ನಗರಸಭೆಯ ಅವಿಶ್ವಾಸ ನಿರ್ಣಯ ಸಭೆಯಲ್ಲಿ ಸಭೆಗಿಂತ ಮುಂಚೆ ನೂರಾರು ಪೊಲೀಸರನ್ನು ಹಾಕಿ ಸಭೆ ಮಾಡಿದ್ದಾರೆ ಎಂದು ಮೊನ್ನೆಯೂ ಕೂಡ ಕೇಳಿದ್ದೆ. ಇಲ್ಲೇ ಮಾನ್ಯ ಗೃಹಸಚಿವರು ಹೇಳಿದರು. ಒಬ್ಬರು ಸದಸ್ಯರನ್ನು ಕರೆದುಕೊಂಡು ಹೋಗಿದ್ದರು, ಅಧ್ಯಕ್ಷರಲ್ಲ ಅವರು ಬಂದು surrender ಆಗುತ್ತಾರೆ ಎಂದು ಉತ್ತರವನ್ನೂ ಕಳುಹಿಸಿದ್ದಾರೆ. ಎಲ್ಲಾ ಅವಿಶ್ವಾಸ ನಿರ್ಣಯ ಆದಮೇಲೆ produce ಮಾಡುತ್ತಾರೆ. ಬೇಲ್ ತೆಗೆದುಕೊಂಡು ಅಧ್ಯಕ್ಷರನ್ನು ಕರೆದುಕೊಂಡು ಬಂದು ಕೂರಿಸಿಕೊಳ್ಳುತ್ತಾರೆ. ಇವತ್ತು ಸಭೆ ಪ್ರಾರಂಭ ಮಾಡುವುದಕ್ಕೆ ಮುಂಚೆ ನೂರಾರು ಪೊಲೀಸರನ್ನು ಹಾಕಿ ಪ್ರಜಾಪ್ರಭುತ್ವದಲ್ಲಿ ಕೆಲಸ ಮಾಡುವುದಾದರೆ ಇವರು ಪೊಲೀಸರನ್ನು ಇಟ್ಟುಕೊಂಡು ಮೀಟಿಂಗ್ ಮಾಡಬೇಕು. ಫೋಟೋ ಸಮೇತ ಇಲ್ಲೇ ಇದೆ, ಅದನ್ನು ಕೊಡುತ್ತೇನೆ. ದಯಮಾಡಿ ಅದನ್ನು ನೋಡಿ. ಒಬ್ಬರಲ್ಲ ನೂರಾರು ಜನ ಪೊಲೀಸರು ಇದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನಿನ್ನೆ ನಗರಸಭೆಯಲ್ಲಿ ವೋಟಿಂಗ್ ಆಗಬೇಕಾದರೆ, ಸಭೆ ನಡವಳಿ ನಡೆಯಬೇಕಾದರೆ ನೂರಾರು ಪೊಲೀಸರನ್ನು ಒಳಗಡೆ ಕೂರಿಸಿ, ನೀವು ಚುನಾವಣೆ ನಡೆಸುವುದಾದರೆ ಇದೇನು ಪ್ರಜಾಪ್ರಭುತ್ವದ ವ್ಯವಸ್ಥೆಯೇ ಹಿಂದೆ ಸದನದಲ್ಲಿಯೂ ಇದೇ ರೀತಿ ಒಂದು ಬಾರಿ ನಡೆದಿತ್ತು ಅದನ್ನು ಅಲ್ಲಿ ಮುಂದುವರೆಸುತ್ತಿದ್ದಾರೆ.

ಅಧ್ಯಕ್ಷರು:– ಯಾರು ಉತ್ತರ ಹೇಳುತ್ತೀರಿ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಮಾನ್ಯ ಸಹಕಾರ ಮತ್ತು ಸಕ್ಕರೆ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗಮನವನ್ನು ಸೆಳೆದಿದ್ದಾರೆ. ಸೋಮವಾರ ಇದಕ್ಕೆ ಮಾನ್ಯ ಗೃಹ ಸಚಿವರ ಮುಖಾಂತರ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಎಸ್. ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಸೋಮವಾರವೇ ಉತ್ತರ ಕೊಡಿಸಲಿ, ನಾವೇನೂ ಬೇಡ ಎನ್ನುವುದಿಲ್ಲ. ಚಾಮರಾಜನಗರದ Municipal Commissioner ನವರು S.P ಮೇಲೆ ಕೇಸ್ ಹಾಕಿದ್ದಾರೆ. ಆ ವರದಿಯನ್ನೂ ತರಿಸಿ, ಪೊಲೀಸ್ ಇಲಾಖೆಯಲ್ಲಿ ಏನಾಗಿದೆ ಎಂದು ತಿಳಿಯುತ್ತದೆ. ಸೋಮವಾರ ಆಗಬಹುದಲ್ಲವೇ?

ಅಧ್ಯಕ್ಷರು:– Information ಅನ್ನು ತರಿಸಿಕೊಂಡು ಉತ್ತರ ಹೇಳುವಾಗ ಸ್ವಲ್ಪ ಅದರ ಬಗ್ಗೆ ಗಮನಿಸಿ. ಈಗ ವಿಧೇಯಕಗಳನ್ನು ತೆಗೆದುಕೊಳ್ಳೋಣ.

ಶ್ರೀ ಗೋವಿಂದ ಎಂ. ಕಾರಜೋಳ:– ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಸಚಿವರು ಇದ್ದಾರೆ, ನಿನ್ನೆ ನಾನು ಮುಧೋಳ ಬೈಪಾಸ್ ರಸ್ತೆ ಕಾಮಗಾರಿ ವಿಳಂಬವಾಗಿರುವ ಬಗ್ಗೆ ಕೇಳಿದ್ದೆ. ಅದಕ್ಕೆ ಉತ್ತರ ಬಂದಿಲ್ಲ.

ಅಧ್ಯಕ್ಷರು:– ಇದು ಶೂನ್ಯವೇಳೆ, ಆನಂತರ ಕೇಳಿ.

ಶ್ರೀ ಗೋವಿಂದ ಎಂ. ಕಾರಜೋಳ:– ಸಾರ್, ನಾನು ನಿನ್ನೆ ಶೂನ್ಯವೇಳೆಯಲ್ಲಿ ಕೇಳಿದ್ದು ಇವತ್ತು ಉತ್ತರ ನೀಡುತ್ತೇವೆ ಎಂದು ಹೇಳಿದ್ದರು.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾಹಿತಿಯನ್ನು ತರಿಸಿಕೊಡುತ್ತೇನೆ.

ಅಧ್ಯಕ್ಷರು:– ಆಯಿತು, ತರಿಸಿಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಿನ್ನೆ ಶೂನ್ಯವೇಳೆಯಲ್ಲಿ ಲೋಕೋಪಯೋಗಿ ಸಚಿವರಲ್ಲಿ ನೈಸ್ ಬಗ್ಗೆ ಕೇಳಲಾಗಿತ್ತು. ನೈಸ್‌ಗೆ ಸಂಬಂಧಿಸಿದಂತಹ file ಗಳನ್ನೆಲ್ಲಾ ಸುಟ್ಟು ಹಾಕಿದ್ದಾರಂತೆ. ಸದನ ಸಮಿತಿ ಮಾಡಿದ್ದೀರಿ.

ಅಧ್ಯಕ್ಷರು:– ಆ ವಿಷಯದ ಬಗ್ಗೆ ಆನಂತರ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್:– ನಿನ್ನೆ, ಇವತ್ತು ಉತ್ತರ ಕೊಡುತ್ತೇವೆ ಎಂದು ಹೇಳಿದ್ದರು.

ಡಾ॥ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಪತ್ರಿಕೆಯಲ್ಲಿ ಬಂದಿರುವುದನ್ನು ನಾನು ನೋಡಿದ್ದೇನೆ. ತಾವು ಮಾತನಾಡುವಾಗ ನಾನು ಕ್ಯಾಬಿನೆಟ್ ಸಬ್‌ಕಮಿಟಿ ಮೀಟಿಂಗ್‌ನಲ್ಲಿದ್ದೆ. ಈಗಾಗಲೇ ನಾನು ಇದಕ್ಕೆ ಸಂಬಂಧಿಸಿದಂತೆ ಒಂದು House Committee ಮಾಡಿದ್ದೇವೆ. All these things are looked into by the House Committee. I will also get all those reports.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಜಯಚಂದ್ರರವರು ಸದನ ಸಮಿತಿಯ ಅಧ್ಯಕ್ಷರಿದ್ದಾರೆ. ಅವರು ನಾಳೆ ಲೋಕೋಪಯೋಗಿ ಸಚಿವರಿಂದ ಉತ್ತರ ಕೊಡಿಸುತ್ತೇನೆ ಎಂದು ಹೇಳಿದರು.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ನಾನು ರಿಪೋರ್ಟ್ ಅನ್ನು ನೋಡಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Files ಅನ್ನು ಸುಟ್ಟು ಹಾಕಿರುವ ಬಗ್ಗೆ ತಾವು ಸ್ಪಷ್ಟೀಕರಣ ಕೊಡಿ. ನಾನು ನಿಮಗೆ ಇನ್ನೇನೂ ಕೇಳುವುದಿಲ್ಲ. ನೈಸ್‌ಗೆ ಸಂಬಂಧಪಟ್ಟ files ಅನ್ನು ಸುಟ್ಟುಹಾಕಿದ್ದಾರೆ ಎಂದು ಪತ್ರಿಕೆಯಲ್ಲಿ ಬಂದಿದೆ. ಅದರ ಬಗ್ಗೆ ನಾನು ಸ್ಪಷ್ಟೀಕರಣ ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡಿ. ಸದನ ಸಮಿತಿ ನಡೆಯಲಿ.

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ನನಗೂ detailed ಮಾಹಿತಿ ಇಲ್ಲ. ನಮ್ಮ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಏನಾಗಿದೆ ಎಂದು ಹೇಳುತ್ತೇನೆ.

(ಗೊಂದಲ)

ಅಧ್ಯಕ್ಷರು:– ಯಾವತ್ತು ಉತ್ತರ ನೀಡುತ್ತೀರಿ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇದು ನುಣಚಿಕೊಳ್ಳುವಂತಹ ಕೆಲಸ. ಲಿಖಿತವಾಗಿ ನಾಳೆ ಉತ್ತರ ಕೊಡಿ ಇವತ್ತು ಕೊಡಬೇಕಾಗಿತ್ತು.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಅಧಿವೇಶನ ಮುಗಿಯುವುದರೊಳಗೆ ಎಲ್ಲಾ detailed report ಕೊಡುತ್ತೇನೆ.

(ಗೊಂದಲ)

ಅಧ್ಯಕ್ಷರು:– ಸೋಮವಾರ ಉತ್ತರ ನೀಡುತ್ತೀರಾ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಅಧ್ಯಕ್ಷರೆ, ಎಲ್ಲಾ detail ಆಗಿ ಏನೇನು ಆಗಿದೆ ಎಂದು ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಉತ್ತರ ನೀಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಇವತ್ತು ಉತ್ತರ ನೀಡುತ್ತೀರೋ ಅಥವಾ ಸೋಮವಾರ ನೀಡುತ್ತೀರೋ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಅಧಿವೇಶನ ಮುಗಿಯುವುದರೊಳಗೆ ಉತ್ತರ ನೀಡುತ್ತೇನೆ. I will discuss in detail.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇದನ್ನು avoid ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಸೋಮವಾರ ಉತ್ತರ ನೀಡುತ್ತೀರಾ? ಹೌದೋ, ಇಲ್ಲವೋ ಎಂದು ಹೇಳಿ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– Avoid ಮಾಡುವುದಿದ್ದರೆ house committee ಯನ್ನು ಏಕೆ ಮಾಡುತ್ತಿದ್ದೆವು?

(ಗೊಂದಲ)

ಅಧ್ಯಕ್ಷರು:– ಮಾನ್ಯ ಸಚಿವರೆ ಇವತ್ತು ಉತ್ತರ ನೀಡುತ್ತೀರೋ ಅಥವಾ ಸೋಮವಾರ ಉತ್ತರ ನೀಡುತ್ತೀರೋ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಸಾರ್, ಇವತ್ತು ಎರಡು ಗಂಟೆಗೆ ಅಧಿವೇಶನ ಮುಗಿಯುತ್ತದೆ. ಇವತ್ತು ಉತ್ತರ ಕೊಡುವುದಕ್ಕಾಗುವುದಿಲ್ಲ.

(ಗೊಂದಲ)

ಅಧ್ಯಕ್ಷರು:– ಹಾಗಾದರೆ ಸೋಮವಾರ ಉತ್ತರ ನೀಡಿ.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಏನೇನು ಆಗಿದೆ ಎಂದು ನಾನು details ತೆಗೆದುಕೊಳ್ಳಬೇಕಲ್ಲವೇ?

(ಗೊಂದಲ)

ಅಧ್ಯಕ್ಷರು:– ಆಯಿತು ಮಂಗಳವಾರ ಉತ್ತರ ನೀಡುತ್ತೀರಾ?

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– I will give everything in detail.

(ಗೊಂದಲ)

ಅಧ್ಯಕ್ಷರು:– ಯಾವತ್ತು ಉತ್ತರ ನೀಡುತ್ತೀರಿ ಎನ್ನುವುದನ್ನು ಹೇಳಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಸಾರ್ ಇವರು avoid ಮಾಡುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು:– ಇಲ್ಲ. ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– Papers ನ್ನೆಲ್ಲಾ ಸುಟ್ಟುಬಿಟ್ಟಿದ್ದಾರೆ. ಸದನ ಸಮಿತಿಯಲ್ಲಿ ಏನೂ ಕೆಲಸ ಆಗುತ್ತಿಲ್ಲ. ಇಲ್ಲಿ ಸಾಕಷ್ಟು ಚರ್ಚೆ ಆಯಿತು.

(ಗೊಂದಲ)

ಡಾ॥ ಹೆಚ್.ಸಿ. ಮಹದೇವಪ್ಪ:– ಮಾನ್ಯ ಜಗದೀಶ್ ಶೆಟ್ಟರೆ, ಅದನ್ನು ಮುಚ್ಚುಹಾಕುವಂಥದ್ದು ಏನೂ ಇಲ್ಲ. ಏನಿದೆ details ಎಲ್ಲವನ್ನೂ ಕೊಡುತ್ತೇನೆ. ಬಿಡಿ. I will furnish all those details.

ಅಧ್ಯಕ್ಷರು:– ತರಿಸಿಕೊಡುತ್ತಾರೆ ಬಿಡಿ.

ಶ್ರೀ ಸಿ.ಟಿ. ರವಿ:– ಇಲಾಖೆ ಇರುವುದೇ ಮುಚ್ಚಿ ಹಾಕುವುದಕ್ಕೆ.

(ಗೊಂದಲ)

ಅಧ್ಯಕ್ಷರು:– ಮಂತ್ರಿಗಳೆ, ಸೋಮವಾರ ಕೊಡಿ, ಮಂಗಳವಾರ ಅಥವಾ ಬುಧವಾರ ಕೊಡಿ.

ಡಾ॥ ಹೆಚ್.ಸಿ. ಮಹದೇವಪ್ಪ:– ಆಗಲಿ ಸರ್.

ಶ್ರೀ ಜಗದೀಶ್ ಶೆಟ್ಟರ್:– ಯಾವಾಗ ಕೊಡುತ್ತೀರಿ?

ಡಾ॥ ಹೆಚ್.ಸಿ. ಮಹದೇವಪ್ಪ:– ಸೋಮವಾರ ರೆಡಿ ಆದರೆ ಸೋಮವಾರ ಕೊಡುತ್ತೇನೆ. ಬುಧವಾರ ಆದರೆ ಬುಧವಾರ ಕೊಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಎರಡು ದಿವಸದಲ್ಲಿ ಕೊಡಬೇಕು.

Dr. H.C. MAHADEVAPPA:- I will give details.

ಅಧ್ಯಕ್ಷರು:– ಕೊಡಿಸೋಣ ಬಿಡಿ. ಈಗ ವಿಧೇಯಕಗಳನ್ನು ಪರ್ಯಾಲೋಚಿಸುವುದು. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ) ವಿಧೇಯಕ, 2014. ಮಾನ್ಯ ಸಹಕಾರ ಸಚಿವರಿಗೆ authorized ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಾವು ನಿನ್ನೆ ಅವರ ಪರವಾಗಿ ಕಾನೂನು ಸಚಿವರು ವಿಧೇಯಕವನ್ನು ಪರ್ಯಾಲೋಚಿಸುವಾಗ ಬೇಡವೆಂದು ಹೇಳಿದ್ದೇವೆ. ನಾವು ಕಾನೂನು ಸಚಿವರಿಗೆ request ಮಾಡಿಕೊಂಡು ಸಂಬಂಧಪಟ್ಟ ಸಚಿವರಿಂದ ಮಾಡಿಸಿ ಎಂದು ಹೇಳಿದ್ದೇವೆ.

ಅಧ್ಯಕ್ಷರು:– ನಿನ್ನೆ ಆ ಕಾರಣಕ್ಕಾಗಿ ಹಿಂದಕ್ಕೆ ಹೋಯಿತು. ನಿನ್ನೆ ಸ್ವಂತ ಕಾರ್ಯಕ್ರಮ, ಇವತ್ತು official ಕಾರ್ಯಕ್ರಮ. ಬೇಗ ಪೂರೈಸಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಮಾನ್ಯ ಸಚಿವರೇ, ಬರಬೇಕು. ನೀವು ಇಂಥದ್ದಕ್ಕೆ ಅವಕಾಶ ಕೊಡಬಾರದು.

ಅಧ್ಯಕ್ಷರು:– ಆಯಿತು, ಸೋಮವಾರ ಹಾಕಿಕೊಳ್ಳೋಣ. ಕರ್ನಾಟಕ ಸರೋವರ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2014 ಅನ್ನು ಪರ್ಯಾಲೋಚಿಸುವುದು.

ಶ್ರೀ ಜಗದೀಶ್ ಶೆಟ್ಟರ್:– ಇದನ್ನು ಸೋಮವಾರ ಚರ್ಚೆಗೆ ಇಟ್ಟುಕೊಳ್ಳಿ.

ಅಧ್ಯಕ್ಷರು:– ಕರ್ನಾಟಕ ಕಾಕಂಬಿ ನಿಯಂತ್ರಣ ವಿಧೇಯಕ, 2014.

ಶ್ರೀ ಜಗದೀಶ್ ಶೆಟ್ಟರ್:– ಇದನ್ನು ನಂತರ ಚರ್ಚೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು:– ಅದನ್ನು ವಿತ್‌ಡ್ರಾ ಮಾಡಿ ಮುಂದಿನ ಅಧಿವೇಶನಕ್ಕೆ ತರುತ್ತಾರಂತೆ ಬಿಡಿ.

ಶ್ರೀ ಜಗದೀಶ್ ಶೆಟ್ಟರ್:– ಆಗಬಹುದು. ಸೋಮವಾರ ಅರಣ್ಯ ಸಚಿವರ ಬಿಲ್ ಚರ್ಚೆಗೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು:– ರಾಜ್ಯದ ಸಮಸ್ಯೆಯ ಬಗ್ಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವುದನ್ನು ಮುಂದುವರೆಸಿ, ಬೇಗ ಪೂರೈಸಬೇಕು.